# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಯಲಹಂಕ ವಲಯ

## ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿ, ಯಲಹಂಕ ಉಪನಗರ ಉಪ ವಿಭಾಗ

## ವಾರ್ಡ್ ನಂ. 04ರ (ಯಲಹಂಕ ಉಪನಗರ) ವಾರ್ಡ್ ಕಮಿಟಿ ಸಭೆಯ ನಡವಳಿಗಳು.

ದಿನಾಂಕ: 06-02-2021 ರಂದು ಸಂಜೆ 4.00 ಗಂಟೆಗೆ ವಾರ್ಡ್ ನಂ-04 ಯಲಹಂಕ ಉಪನಗರ ವಾರ್ಡ್ ಸಮಿತಿಯ ಮಾನ್ಯ ನೊಡೆಲ್ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಜೊತೆ ಯಲಹಂಕ ಉಪನಗರ ಉಪ ವಿಭಾಗದ ಕಛೇರಿಯಲ್ಲಿ ನೆಡೆದ ವಾರ್ಡ್ ಕಮಟಿ ಸಭೆಯ ನಡವಳಿಗಳು.

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿ ಹೆಸರು | ಪದನಾಮ |
|---|---|---|
| 01 | ಶ್ರೀ.ಮನೋಜ್ ಜೈನ್, ಐ.ಎ.ಎಸ್ | ಮಾನ್ಯ ವಿಶೇಷ ಆಯುಕ್ತರು (ಯೋಜನೆ) ಬಿ.ಬಿ.ಎಂ.ಪಿ ನೋಡಲ್ ಅಧಿಕಾರಿಗಳು (ವಾರ್ಡ್ ನಂ-04) |
| 02 | ಶ್ರೀ.ಹೆಚ್.ಪಿ.ಸಚಿನ್ | ಸ.ಕಾ.ಅ, ಬಿ.ಬಿ.ಎಂ.ಪಿ (ಯ.ಉ.ಉ.ವಿ) |
| 03 | ಶ್ರೀಮತಿ. ಕೃತಿಕಾ | ಸಹಾಯಕ ಕಂದಾಯ ಅಧಿಕಾರಿಗಳು (ಯ.ಉ.ಉ.ವಿ) ಗೈರು ಹಾಜರು |
| 04 | ಶ್ರೀ.ಹೆಚ್.ಕೆ.ದೇವರಾಜ್ | ಸ.ಕಾ.ಅ (ರೋಡ್ ಇನ್‌ಫ್ರಸ್ಟಚರ್ಸ್ ಬಿ.ಬಿ.ಎಂ.ಪಿ) |
| 05 | ಶ್ರೀ.ಶ್ರೀನಿವಾಸ ಜೆ.ಎನ್ | ಸ.ಅ ಬಿ.ಬಿ.ಎಂ.ಪಿ (ರಾಜಕಾಲುವೆ) |
| 06 | ಶ್ರೀ.ಪ್ರಭುದ್ದ ಕಾಂಬ್ಳೆ | ಸ.ಕಾ.ಅ ಬಿ.ಬಿ.ಎಂ.ಪಿ (ಎಸ್.ಡಬ್ಲ್ಯೂ.ಎಂ) ಗೈರು ಹಾಜರು |
| 07 | ಶ್ರೀಮತಿ. ಅನುಸೂಯ ಡಿ | ಸ.ಕಾ.ಅ (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಒಳಚರಂಡಿ ವಿಭಾಗ (ಗೈರು ಹಾಜರು) |
| 08 | ಶ್ರೀ.ಪಿ.ಎಂ.ಮಲ್ಯಾದ್ರಿ | ತೋಟಗಾರಿಕೆ ಪರಿವೀಕ್ಷಕರು (ತೋಟಗಾರಿಕೆ) |
| 09 | ಶ್ರೀ.ರಾಮಸಂಜೀವಯ್ಯ | ಸ.ಅ ವಾರ್ಡ್ ನಂ-04 ಹಾಗೂ ಕಾರ್ಯದರ್ಶಿಗಳು. |
| 10 | ಶ್ರೀ.ವಿನಾಯಕ ಕೆ.ಎಂ | ಸ.ಅ (ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| 11 | ಶ್ರೀ.ಆನಂದ | ಸ.ಅ (ಬೇಸ್ಕಾಂ) |
| 12 | ಶ್ರೀ.ಕೆ.ಮುನಿಸ್ವಾಮಿ | ಎ.ಎಸ್.ಐ ಯಲಹಂಕ ಉಪನಗರ ಪೋಲಿಸ್ ಠಾಣೆ |
| 13 | ಶ್ರೀ.ಲಿಂಗರಾಜು | ಹಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ ವಾರ್ಡ್ -4 |
| 14 | ಶ್ರೀಮತಿ. ಎನ್.ನೇತ್ರಾವತಿ | ಕಿರಿಯ ಆರೋಗ್ಯ ಪರಿವೀಕ್ಷಕರು ಬಿ.ಬಿ.ಎಂ.ಪಿ |
| 15 | ಶ್ರೀ.ಶೇಖರ್ | ಅರಣ್ಯ ಬಿ.ಬಿ.ಎಂ.ಪಿ ಯಲಹಂಕ ವಲಯ |
| 16 | ಶ್ರೀ.ಕಿರಣ್ ಬಿ. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ) ಯಲಹಂಕ |

| | | |
|---|---|---|
| 17 | ಶ್ರೀ.ಮದುಸೂದನ್ | ಗುತ್ತಿಗೆದಾರರು (ವಿದ್ಯುತ್) |
| 18 | ಶ್ರೀಮತಿ. ಪಾವನಾ ನಾಗತಿ | ಸ.ಅ (ಯೋಜನೆ) ಬಿ.ಬಿ.ಎಂ.ಪಿ |
| 19 | ಅಸ್ರಬಾನು ಸಿ.ಎಸ್ | ಸ.ಅ (ಬಿ.ಡಬ್ಲೂ.ಎಸ್.ಎಸ್.ಬಿ ಒಳಚರಂಡಿ ಮಂಡಳಿ) |
| 20 | ಶ್ರೀಮತಿ. ಅನಿತ | ಅಸೆಸರ್ (ವಾರ್ಡ್ ನಂ-04) ಕಂದಾಯ ಇಲಾಖೆ |
| 21 | ಡಾಕ್ಟರ್ ಯೋಗನಂದ | ಆರೋಗ್ಯ ವೈದ್ಯಾಧಿಕಾರಿಗಳು ಗೈರು ಹಾಜರು |
| 22 | ಶ್ರೀ.ರಾಜೇಂದ್ರ ನಾಯಕ್ | ಕಾ.ಅ ಬಿ.ಬಿ.ಎಂ.ಪಿ (ವಿದ್ಯುತ್) ಗೈರು ಹಾಜರು |
| | **ಬಡಾವಣೆ ಕ್ಷೇಮಾಭಿವೃದಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು/** | |
| 01 | ಶ್ರೀ.ಎಂ.ಸತೀಶ್ | ಮಾಜಿ ಸದಸ್ಯರು (ಬಿ.ಬಿ.ಎಂ.ಪಿ) |
| 02 | ಶ್ರೀ.ಸಂಗಪ್ಪ | ಆರ್,ಡಬ್ಲ್ಯೂ.ಎ ಎ ಸೆಕ್ಟರ್ |
| 03 | ಶ್ರೀ.ಟಿ.ಕೆ.ಪುಟ್ಟಸ್ವಾಮಿ | ಆರ್,ಡಬ್ಲ್ಯೂ.ಎ ಬಿ. ಸೇಕ್ಟರ್ |
| 04 | ಶ್ರೀ.ವಿಜಯ್ ಕುಮಾರ್ | ಆರ್,ಡಬ್ಲ್ಯೂ.ಎ ಬಿ. ಸೇಕ್ಟರ್ |
| 05 | ಶ್ರೀ.ಶಂಕರ್ ರೆಡ್ಡಿ | ಆರ್,ಡಬ್ಲ್ಯೂ.ಎ ಮಾತ್ರ ಬಡಾವಣೆ |
| 06 | ಶ್ರೀ.ರಕ್ಷಿತ್ | ಐ.ಟಿ.ಸಿ (ಒಣ ಕಸ ಕೇಂದ್ರ) |
| 07 | ಆರ್.ಡಿ.ಪುಟ್ಟಸ್ವಾಮಿ | ಆರ್.ಡಬ್ಲ್ಯೂ.ಎ |
| 08 | ಪ್ರತಿಬಾ | ಆರ್.ಡಬ್ಲ್ಯೂ.ಎ ಪೂರ್ವ ವೆನಿಜಿಯಾ |
| 09 | ಕೆ.ಎಸ್.ನಾರಾಯಣ | ಆರ್,ಡಬ್ಲ್ಯೂ.ಎ ಬಿ. ಸೇಕ್ಟರ್ |
| 10 | ಶ್ರೀ.ವಿ.ಎಸ್.ಕಾಮತ್ | ಆರ್,ಡಬ್ಲ್ಯೂ.ಎ |
| 11 | ಶ್ರೀ.ಮಣಿ | ಆರ್,ಡಬ್ಲ್ಯೂ.ಎ, ಎಲ್.ಬಿ.ಎಸ್.ನಗರ |

ಶ್ರೀ. ಸಚಿನ್ ಹೆಚ್.ಪಿ. ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪನಗರ ಉಪ ವಿಭಾಗರವರು ಸಭೆಗೆ ಹಾಜರಿದ್ದ ನೋಡೆಲ್ ಅಧಿಕಾರಿಗಳು ಹಾಗೂ ಬಾಗವಹಿಸಿದ್ದ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ ಸಭೆ ಪ್ರಾರಂಭಿಸಲು ನೋಡೆಲ್ ಅಧಿಕಾರಿರವರನ್ನು ಕೋರಲಾಯಿತು

ಶ್ರೀ. ಮನೋಜ್ ಜೈನ್ ಐ.ಎ.ಎಸ್, ಮಾನ್ಯ ವಿಶೇಷ ಆಯುಕ್ತರು ಬಿ.ಬಿ.ಎಂ.ಪಿ (ಯೋಜನೆ) ಹಾಗೂ ಸಮಿತಿಯ ನೋಡೆಲ್ ಅಧಿಕಾರಿಯವರು ಸಬೆಯನ್ನು ಪ್ರಾರಂಭಿಸಿ ಈ ಹಿಂದಿನ ಸಭೆಯಲ್ಲಿ ಅಂದರೆ ದಿನಾಂಕ: 22-01-2021 ರಂದು ನಡೆದ ಸಭೆಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆ ಕೇಳಿದರು. ಹಾಗೂ ವಾರ್ಡ್ ನಂ-04ರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೆ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡುವಂತೆ ಸಭೆಯಲ್ಲಿ ಸೂಚಿಸಿದರು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 01 | 16ನೇ ಬಿ ಅಡ್ಡರಸ್ತೆಯಲ್ಲಿ ಅಳವಡಿಸಿರುವ ಕೊಳವೆ ಸಾಲುಗಳ ಜಾಗದಲ್ಲಿ ಡಾಂಬರು ಹಾಕಲಾಗಿದ್ದು, ಇದಕ್ಕೆ ಸಂಬಂದಿಸಿದಂತೆ ರಸ್ತೆಯ ಬದಿಯಲ್ಲಿರುವ ಡೆಬ್ರಿಸ್‌ಅನ್ನು | ಸದರಿ ವಿಷಯಕ್ಕೆ ಸಂಬಂದಿಸಿದಂತೆ ನೋಡೆಲ್ ಅಧಿಕಾರಿಗಳು ಬಿ.ಡಬ್ಲ್ಯೂ.ಎಸ್.ಎಸ್.ಬಿ | ಸಹಾಯಕ ಕಾರ್ಯಪಾಲಕ ಅಬಿಯಂತರರು ಒಳಚರಂಡಿ ವಿಭಾಗ (ಬಿ.ಡಬ್ಲ್ಯೂ.ಎಸ್.ಎಸ್.ಬಿ |

| | | | |
|---|---|---|---|
| | ಕೆಟ್ಟ ಚಟುವಟಿಕೆಗಳನ್ನು (ಬಿ.ಡಿ. ಸಿಗರೇಟ್ ಸೇವನೆ ಇತ್ಯಾದಿ) ಮಾಡುತ್ತಿರುತ್ತಾರೆಂದು ಹಾಗೂ ಡಿ ಮಾರ್ಟ್ ಮುಂಭಾಗದ ರಸ್ತೆಯಲ್ಲಿ ಆಟೋ ರೀಕ್ಷಾ ನಿಲ್ದಾಣದಿಂದ ಟ್ರಾಫಿಕ್ ಉಂಟಾಗುತ್ತಿರುವುದಾಗಿ ಸ್ಥಳೀಯರಾದ ಶ್ರೀ.ಶಂಕರ್ ರೆಡ್ಡಿಯವರು ಅಕ್ಷೇಪಣೆ ವ್ಯಕ್ತಪಡಿಸಿದರು. | ಕ್ರಮ ಕೈಗೊಳ್ಳುವಂತೆ ಹಾಗೂ ಸದರಿ ಜಾಗವನ್ನು ವಿಕ್ಷಣೆ ಮಾಡಿ ಡಿ ಮಾರ್ಟ್ ಹಾಗೂ ಇತರೆ ವಾಣಿಜ್ಯ ಮಳಿಗೆಗಳಿಗೆ ನೊಟೀಸ್ ಜಾರಿ ಮಾಡಲು ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ (ಎಸ್.ಡಬ್ಲ್ಯೂ.ಎಂ) ರವರಿಗೆ ಸೂಚಿಸಿದರು ಹಾಗೂ ಆಟೋ ರೀಕ್ಷಾ ನಿಲ್ದಾಣಕ್ಕೆ ಸಂಬಂದಿಸಿದಂತೆ ಟ್ರಾಫಿಕ್ ಇನ್ಸ್‌ಪೇಕ್ಟರ್ ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು. | (ಎಸ್.ಡಬ್ಲ್ಯೂ.ಎಂ ವಿಭಾಗ) ಹಿರಿಯ ಆರೋಗ್ಯ ಪರಿವೀಕ್ಷಕರು (ವಾರ್ಡ್ ನಂ–04) ಮತ್ತು ಟ್ರಾಫಿಕ್ ಇನ್ಸ್‌ಪೇಕ್ಟರ್ (ಯಲಹಂಕ ಉಪನಗರ) |
| 06 | ಪಾದಚಾರಿ ಮಾರ್ಗಗಳಲ್ಲಿ ಸಾರ್ವಜನಿಕರು ಒಡಾಡಲು ಅಡಚಣೆ ಉಂಟು ಮಾಡುವ ಬೊರ್ಡ್‌ಗಳನ್ನು ತೆರವುಗೊಳಿಸಲು ಆರ್.ಡಬ್ಲ್ಯೂ.ಎ. ರವರು ಕೋರಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವಂತೆ ಹಾಗೂ ಪಾದಚಾರಿ ಮಾರ್ಗಗಳಲ್ಲಿಟ್ಟಿರುವ ಸಾಮಾಗ್ರಿಗಳನ್ನು ತೆಗೆದು ಸಾರ್ವಜನಿಕರು ಸರಾಗವಾಗಿ ಒಡಾಡುವಂತೆ ಮಾಡಲು ಸಂಬಂದಿಸಿದ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ–04 ರವರಿಗೆ ಸೂಚಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ–04 |
| 07 | ವಾರ್ಡ್ ನಂ–04ರ ವ್ಯಾಪ್ತಿಯಲ್ಲಿನ ರಸ್ತೆಗಳಲ್ಲಿ ಭಾಗಿರುವ ವಿದ್ಯುತ್ ಕಂಭಗಳನ್ನು ಸರಿಪಡಿಸುವಂತೆ ಆರ್.ಡಬ್ಲ್ಯೂ.ಎ ರವರು ಕೋರಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವಂತೆ ಸಹಾಯಕ ಅಭಿಯಂತರರು ಬೇಸ್ಕಾಂ ರವರಿಗೆ ಸೂಚಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಅಭಿಯಂತರರು ಬೇಸ್ಕಾಂ ಇಲಾಖೆ |
| 08 | ಎ ಸೇಕ್ಟರ್ 15ನೇ ಎ ಮುಖ್ಯರಸ್ತೆಯಲ್ಲಿ ಕೆಲವು ದ್ವೀ ಚಕ್ರ ವಾಹನ ಚಾಲಕರು ರಸ್ತೆಯಲ್ಲಿ ಅತಿ ವೇಗವಾಗಿ ವಾಹನ ಚಲಿಸುತ್ತಿರುತ್ತಾರೆಂದು ಹಾಗೂ ವಾಣಿಜ್ಯ ಮಳಿಗೆಗಳಿಂದ ಜನದಟ್ಟಣೆ ಹಾಗೂ ಟ್ರಾಫಿಕ್ ಉಂಟಾಗುತ್ತಿರುತ್ತದೆ ಎಂದು ಸಭೆಗೆ ಆರ್.ಡಬ್ಲ್ಯೂ.ಎ ರವರು ದೂರನ್ನು ಸಲ್ಲಿಸಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವಂತೆ ಟ್ರಾಫಿಕ್ ಇನ್ಸ್‌ಪೇಕ್ಟರ್ ರವರಿಗೆ ಸೂಚಿಸಿದರು. | ಟ್ರಾಫಿಕ್ ಇನ್ಸ್‌ಪೇಕ್ಟರ್ (ಸಂಚಾರ ವಿಭಾಗ ಯಲಹಂಕ ಉಪನಗರ) |

| | | | |
|---|---|---|---|
| | ತೆರವುಗೊಳಿಸುವಂತೆ ಆರ್.ಡಬ್ಲ್ಯೂ.ಎ ರವರು ಕೋರಿದರು. | ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಒಳಚರಂಡಿ ವಿಭಾಗರವರಿಗೆ ರಸ್ತೆಯ ಬದಿಯಲ್ಲಿರುವ ಡೆಬ್ರಿಸ್‌ಅನ್ನು ತೆರವುಗೊಳಿಸಲು ಸೂಚಿಸಿದರು, | ಇಲಾಖೆ) |
| 02 | 8ನೇ ಬಿ. ಮುಖ್ಯರಸ್ತೆ, 7ನೇ ಬಿ ಮುಖ್ಯರಸ್ತೆ ಹಾಗೂ 7ನೇ ಬಿ ಅಡ್ಡರಸ್ತೆಗಳಲ್ಲಿ ಇತ್ತೀಚೆಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ವತಿಯಿಂದ ಒಳಚರಂಡಿ ಕೊಳವೆ ಸಾಲುಗಳನ್ನು ಅಳವಡಿಸಿದ್ದು, ಸದರಿ ಜಾಗದಲ್ಲಿ ಸಾರ್ವಜನಿಕರ ಓಡಾಟಕ್ಕೆ ಹಾಗೂ ವಾಹನ ಸಂಚಾರಕ್ಕೆ ಅಡ್ಡಿಯುಂಟಾಗಿರುವುದಾಗಿ ತಿಳಿಸಿ ಸದರಿ ರಸ್ತೆಗಳನ್ನು ದುರಸ್ಥಿಗೊಳಿಸಬೇಕೆಂದು ಆರ್.ಡಬ್ಲ್ಯೂ.ಎ ರವರು ಕೋರಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ನೊಡೆಲ್ ಅಧಿಕಾರಿಗಳು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸದರಿ ಜಾಗದಲ್ಲಿರುವ ಹೆಚ್ಚುವರಿ ಮಣ್ಣನ್ನು ಹೊರತೆಗೆದು ವೆಟ್ ಮಿಕ್ಸ್ ಹರಡಿ, ರಸ್ತೆಯನ್ನು ದುರಸ್ಥಿಗೊಳಿಸಲು ಸೂಚಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಹಾಗೂ ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ) |
| 03 | ಯಲಹಂಕ ಬಿ ಸೇಕ್ಟರ್ 15ನೇ ಬಿ ಅಡ್ಡರಸ್ತೆಯ ಪಕ್ಕದಲ್ಲಿರುವ 5 ಮೀಟರ್ ರಸ್ತೆಯನ್ನು ಪುನರ್ ನಿರ್ಮಾಣ ಮಾಡಿಕೊಡಬೇಕೆಂದು ಆರ್.ಡಬ್ಲ್ಯೂ.ಎ ರವರು ಕೋರಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡು ರಸ್ತೆಯನ್ನು ಪುನರ್ ನಿರ್ಮಾಣ ಮಾಡುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಅಬಿಯಂತರರು ವಾರ್ಡ್ ನಂ –04 ರವರಿಗೆ ಸೂಚಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ–04 |
| 04 | ಮಾತೃ ಬಡಾವಣೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವುದಿಲ್ಲ ವೆಂದು ಆರ್.ಡಬ್ಲ್ಯೂ.ಎ ಶಂಕರ್ ರೆಡ್ಡಿ ಯವರು ಅಕ್ಷೆಪಣೆ ವ್ಯಕ್ತಪಡಿಸಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಕ್ರಮ ಕೈಗೊಳ್ಳುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ (ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರಿಗೆ ಸೂಚಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು & ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ ವಿಭಾಗ) |
| 05 | ಡಿ. ಮಾರ್ಟ್ ಹತ್ತಿರ ಇರುವ ವಾಣಿಜ್ಯ ಅಂಗಡಿಗಳ ಸ್ಥಳಗಳಲ್ಲಿ ಸಾರ್ವಜನಿಕರು | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು | ಸಹಾಯಕ ಕಾರ್ಯಪಾಲಕ ಅಭಿಯಂತರರು |

➤ ನೋಡಲ್ ಅಧಿಕಾರಿಗಳು ವಾರ್ಡ್ ನಂ-04ರ ವ್ಯಾಪ್ತಿಯಲ್ಲಿರುವ ರಸ್ತೆಗಳಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಅಳವಡಿಸಿರುವ ನೀರಿನ ಕೊಳವೆ ಸಾಲುಗಳಿಂದ ಉಂಟಾಗುವ ನೀರಿನ ಸೋರಿಕೆ ದುರಸ್ಥಿಗೆ ಸಂಬಂದಿಸಿದಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯಿಂದ ಬಿ.ಬಿ.ಎಂ.ಪಿ ಇಲಾಖೆಗೆ ಪತ್ರ ವ್ಯವಹಾರ ಮಾಡಿ ನೀರಿನ ಸೋರಿಕೆ ಹಾಗೂ ರಸ್ತೆ ದುರಸ್ಥಿ ಪಡಿಸುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರಿಗೆ ಸೂಚಿಸಿದರು.

➤ ನೋಡಲ್ ಅಧಿಕಾರಿಗಳು ಯಲಹಂಕ ಉಪನಗರ ವಾರ್ಡ್ ನಂ -04ರ ವ್ಯಾಪ್ತಿಯಲ್ಲಿ ಬಿ.ಬಿ.ಎಂ.ಪಿ ವತಿಯಿಂದ ಕೈಗೊಂಡು ನಿರ್ವಹಿಸುತ್ತಿರುವ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗಳನ್ನು ತಾಂತ್ರಿಕತೆಯಿಂದ ಕ್ರಮಬದ್ಧವಾಗಿ ನಿರ್ವಹಿಸುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು/ಯಲಹಂಕ ಉಪನಗರ ಉಪ ವಿಭಾಗ/ ಯೋಜನೆ ಹಾಗೂ ಸಹಾಯಕ ಅಭಿಯಂತರರಿಗೆ ಸೂಚಿಸಿದರು.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಯಿತು, ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Ramasanjeeva (signature)

ಶ್ರೀ.ರಾಮಸಂಜೀವಯ್ಯ
ಸಹಾಯಕ ಅಭಿಯಂತರರು ಹಾಗೂ
ಕಾರ್ಯದರ್ಶಿಗಳು, ವಾರ್ಡ್ ನಂ–04

ಶ್ರೀ.ಮನೋಜ್‌ಜೈನ್, ಐ.ಎ.ಎಸ್.
ಮಾನ್ಯ ವಿಶೇಷ ಆಯುಕ್ತರು (ಯೋಜನೆ) ಹಾಗೂ
ನೋಡೆಲ್ ಅಧಿಕಾರಿಗಳು ವಾರ್ಡ್ ನಂ–04

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.
3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರಿಗೆ ಕಳುಹಿಸಿದೆ.
4. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ (ವಿದ್ಯುತ್) ಯಲಹಂಕ ವಲಯ ಸೂಕ್ತ ಕ್ರಮಕ್ಕಾಗಿ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ಯಲಹಂಕ ವಿಭಾಗರವರ ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೇಸ್ಕಾಂ/ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯೆಲಹಂಕ ಉಪ ವಿಭಾಗರವರ ಸೂಕ್ತ ಕ್ರಮಕ್ಕಾಗಿ.
7. ಕಛೇರಿ ಕಡತಕ್ಕೆ.